ಮಾಹೆ	ಲೀವ್ ಅಂಡ್ ಲೈಸನ್ಸ್ ಶುಲ್ಕ	ರೇವಣಿ ಮೇಲಿನ ಬಡ್ಡಿ
ಏಪ್ರಿಲ್–06	1,33,116–00	1,43,602–00
ಮೇ–06	2,06,854–00	–
ಜೂಟ್ಟ–06	1,03,138–00	–
ಜುಲೈ–06	2,46,073–00	93,465–00
ಆಗಸ್ಟ್ –06	3,37,770–00	–
ಸೆಪ್ಟೆಂಬರ್–06	2,96,787–00	–
ಅಕ್ಟೋಬರ್–06	2,84,857–00	1,07,517–00
ನವೆಂಬರ್–06	1,79,070–00	23,304–00
ಡಿಸೆಂಬರ್–06	1,90,913–00	–
ಒಟ್ಟು	19,78,598–00	3,67,888–00

149 (234) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯಾದ್ಯಂತ ವಿತರಿಸಲಾಗಿರುವ ಅಕ್ಷಯ, ಅಂತ್ಯೋದಯ, ಅನ್ನಪೂರ್ಣ ಮತ್ತು ಎ ಪಿ ಎಲ್ ಕಾರ್ಡುಗಳ ಒಟ್ಟು ಸಂಖ್ಯೆ ಎಷ್ಟು , (ಪ್ರತ್ಯೇಕ ವಿವರ ನೀಡುವುದು) ,

ಆ) ಜಮಖಂಡಿ ತಾಲ್ಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಷ್ಟು, (ಪ್ರತ್ಯೇಕ ವಿವರ ನೀಡುವುದು) ,

ಇ) ಈ ತಾಲ್ಲೂಕಿನಲ್ಲಿ ವಿತರಿಸಲಾದ ಕಾರ್ಡುಗಳೆಷ್ಟು , ಬಾಕಿ ಉಳಿದಿರುವವರಿಗೆ ಕಾರ್ಡುಗಳನ್ನು ಎಷ್ಟು ಕಾಲಮಿತಿಯೊಳಗಾಗಿ ವಿತರಿಸಲಾಗುವುದು ,

ಈ) ಕುಟುಂಬಗಳ ಸರ್ವೆಯಲ್ಲಿ ಭಾರಿ ಅವ್ಯವಹಾರ ಮತ್ತು ಪಕ್ಷಪಾತದಿಂದ ಬಡ ಕುಟುಂಬಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಹಾಗಿದ್ದಲ್ಲಿ, ಖಾಸಗಿ ಏಜೆನ್ಸಿಗೆ ಸರ್ವೆ ಕಾರ್ಯವನ್ನು ಒಪ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ ,

ಊ) ಕುಟುಂಬದಲ್ಲಿರುವ ಜನರ ಸಂಖ್ಯೆಗನುಗುಣವಾಗಿ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯಾದ್ಯಂತ ವಿತರಿಸಲಾಗಿರುವ ಪಡಿತರ ಚೀಟಿದಾರರ ಸಂಖ್ಯೆ ಈ ಕೆಳಕಂಡಂತಿರುತ್ತದೆ ,

ಅನ್ನಪೂರ್ಣ	–	25,452
ಎಎವೈ	–	11,75,959
ಬಿಪಿಎಲ್	–	53,85,258
ಎಪಿಎಲ್	–	52,49,489

ಆ) ಜಮಖಂಡಿ ತಾಲ್ಲೂಕಿನಲ್ಲಿ 53,725 ಬಡತನ 'ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಲಾಗಿದೆ ಕುಟುಂಬಗಳ ವಿವರ ಕೆಳಕಂಡಂತಿದೆ

ಅನ್ನಪೂರ್ಣ	–	358
ಅಂ ಅ ಯೋ	–	10,412
ಅಕ್ಷಯ	–	42,955
ಒಟ್ಟು	–	53,725

ಇ) ತಾಲ್ಲೂಕಿನಲ್ಲಿ ವಿತರಿಸಿರುವ ಕಾರ್ಡ್‌ಗಳ ಸಂಖ್ಯೆ ಈ ಕೆಳಕಂಡಂತಿದೆ –

ಅನ್ನಪೂರ್ಣ	–	358
ಅಂ ಅ ಯೋ	–	10,412
ಅಕ್ಷಯ	–	42,955
ಎಪಿಎಲ್	–	41,504

ಸಾರ್ವಜನಿಕ ಅಹವಾಲುಗಳ ವಿಲೇವಾರಿಯ ನಂತರ ಅರ್ಹತೆಗೆ ಅನುಗುಣವಾಗಿ ಕಾರ್ಡುಗಳನ್ನು ವಿತರಿಸಲಾಗುವುದು

ಈ) ಇಲ್ಲಾ, ರಾಜ್ಯಾದ್ಯಂತ ಮನೆ ಮನೆ ಸಮೀಕ್ಷೆ ಕಾರ್ಯದಲ್ಲಿ ಫಲಾನುಭವಿಗಳನ್ನು ಗುರುತಿಸಿ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಣೆ ಮಾಡಲಾಗಿದೆ ಈ ಸಂದರ್ಭದಲ್ಲಿ ಪಡಿತರ ಚೀಟಿ ಪಡೆಯಲು ವಂಚಿತರಾದವರು / ಲೋಪದೋಷಗಳು ಕಂಡು ಬಂದಲ್ಲಿ ಅಂತಹವರಿಂದ ಅರ್ಜಿಗಳನ್ನು ಸ್ವೀಕರಿಸಲಾಗಿದೆ ಸದರಿ ಅಹವಾಲುಗಳನ್ನು ಶೀಘ್ರದಲ್ಲಿಯೇ ಪರಿಶೀಲಿಸಿ ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಲಾಗುವುದು

ಉ) ಇಲ್ಲ

ಊ) ಇಲ್ಲ